3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ, ತುಮಕೂರು.

**<u>Spl.C. 49/2024</u>**

**<u>ಫಿರ್ಯಾದುದಾರಃ</u>** ರಾಜ್ಯ ಸರ್ಕಾರದ ಪರವಾಗಿ

ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆ

**ವಿರುದ್ಧ**

**<u>ಆರೋಪಿತರುಃ</u>** ರಘು.ಆರ್. ಬಿನ್ ರಂಗಸ್ವಾಮಿ,

34 ವರ್ಷ, ಹೊಸ ಬಡಾವಣೆ,

ಹೆಗ್ಗೆರೆ, ಕಸಬಾ ಹೋಬಳಿ, ತುಮಕೂರು.

## <u>ದೋಷಾರೋಪಣೆ</u>

ಎ.ನಾಗಿರೆಡ್ಡಿ, 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ರಚಿಸುತ್ತಿದ್ದೇನೆ.

ಪರಿಶಿಷ್ಟ ಜಾತಿ ಆದಿಕರ್ನಾಟಕ ಜನಾಂಗಕ್ಕೆ ಸೇರಿದ ಚಾಸಾ.1 ರವರು ಆರೋಪಿಯಾದ ನಿಮ್ಮಿಂದ ತನ್ನ ಮಗನ ವಿದ್ಯಾಭ್ಯಾಸಕ್ಕಾಗಿ ಹಂತಹಂತವಾಗಿ ರೂ.1,40,000 ಗಳನ್ನು ತಿಂಗಳ ಬಡ್ಡಿಗೆಂದು ಸಾಲ ಪಡೆದುಕೊಂಡಿದ್ದು, ನಂತರ ನೀವು ಪ್ರತಿದಿನ ರೂ.1,000 ರಂತೆ ಕಟ್ಟಬೇಕೆಂದು ಹೇಳಿದಾಗ, ಚಾಸಾ.1 ರವರು ಪ್ರತಿ ದಿನ ಕ್ಯಾಷ್ ಮೂಲಕ ಮತ್ತು ಫೋನ್ ಪೇ ಮೂಲಕ ಹಣ ಕಟ್ಟುತ್ತಾ ಬಂದಿದ್ದು, ಆಗಸ್ಟ್ ಮಾಹೆಯಲ್ಲಿ ಎರಡು ದಿನ ಹಣ ಕಟ್ಟಲು ಸಾಧ್ಯವಾಗದ ಕಾರಣ ದಿಃ17.08.2023 ರಂದು ಸಂಜೆ 5 ಗಂಟೆ ಸಮಯದಲ್ಲಿ

ಆರೋಪಿಯಾದ ನೀವು ಹಣ ವಸೂಲಿಗಾಗಿ ತುಮಕೂರು ಟೌನ್ ರಾಘವೇಂದ್ರ ನಗರದ ವರಸಿದ್ದಿವಿನಾಯಕ ದೇವಸ್ಥಾನದ ಪಕ್ಕದಲ್ಲಿರುವ ದ.ರಾ.ಬೇಂದ್ರೆ ರಸ್ತೆಯಲ್ಲಿ ಕಾಯುತ್ತಾ ನಿಂತು ಚಾಸಾ.1 ರವರು ಬಂದಾಗ ಹಣ ಕೊಡುವಂತೆ ಕೇಳಿದಾಗ ಚಾಸಾ.1 ರವರು ಈಗ ಕಂತು ಕಟ್ಟಲು ಹಣ ಇಲ್ಲ ಎಂದು ಹೇಳಿದಾಗ ಆರೋಪಿಯಾದ ನೀವು ಚಾಸಾ.1 ರವರನ್ನು ಕುರಿತು ಹೊಲೆ ಮಾದಿಗ ಮುಂಡೇ, ನಿನ್ನ ಜಾತಿ ಬುದ್ದಿ ಎಲ್ಲಿ ಬಿಡುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆದ್ದರಿಂದ, ಆರೋಪಿಯಾದ ನೀವು ಭಾ.ದಂ.ಸಂ.504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯಾದ ನೀವು ಒಕ್ಕಲಿಗ ಜಾತಿಗೆ ಸೇರಿದ ಆರೋಪಿಯಾದ ನೀವು ಚಾಸಾ.1 ರವರು ಪರಿಶಿಷ್ಟ ಆದಿಕರ್ನಾಟಕ ಜಾತಿಗೆ ಸೇರಿರುತ್ತಾರೆ ಎಂದು ಗೊತ್ತಿದ್ದರೂ ಸಹ ಸಾರ್ವಜನಿಕವಾಗಿ ಚಾಸಾ.1 ರವರನ್ನು ಕುರಿತು ಹೊಲೆ ಮಾದಿಗ ಮುಂಡೇ, ನಿನ್ನ ಜಾತಿ ಬುದ್ದಿ ಎಲ್ಲಿ ಬಿಡುತ್ತೀಯಾ ಎಂದು ಬೈದು ಜಾತಿ ನಿಂದನೆ ಮಾಡಿರುತ್ತೀರಿ. ಆದ್ದರಿಂದ, ಆರೋಪಿಯಾದ ನೀವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆಯ ಕಲಂ 3(1)(r)(s) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ, ದಿನಾಂಕ 20.11.2023 ರಂದು ಸಂಜೆ 4 ಗಂಟೆ ಸಮಯದಲ್ಲಿ ಆರೋಪಿಯಾದ ನೀವು ಚಾಸಾ.1 ರವರನ್ನು ನಿಮ್ಮ ಹೆಗ್ಗೆರೆಯ ಎನ್.ಹೆಚ್.206 ರಸ್ತೆಯಲ್ಲಿರುವ ಜಿ.ಎಂ.ಬಾರ್ ಪಕ್ಕದಲ್ಲಿರುವ ನಿಮ್ಮ ಬಾಬ್ತು ರೂಂ ನ್ನು ಕ್ಲೀನ್ ಮಾಡಿಕೊಡುವಂತೆ ಕರೆಸಿಕೊಂಡಿದ್ದು, ಅದರಂತೆ ಚಾಸಾ.1 ರವರು ರೂಂ ನ್ನು ಕ್ಲೀನ್ ಮಾಡಿಕೊಟ್ಟು ಮನೆಗೆ ಸಂಜೆ 4.30 ಗಂಟೆಗೆ

ಹೋಗುತ್ತೇನೆಂದು ಹೊರಟಾಗ ನೀವು ರೂಮಿನ ಒಳಗೆ ಬಂದು ರೂಮಿನ ಡೋರ್ ಹಾಕಿ ಕೈಯನ್ನು ಹಿಡಿದು ಎಳೆದಾಡಿ ಅಸಭ್ಯವಾಗಿ ನಡೆದುಕೊಂಡಿರುತ್ತೀರಿ. ಆದ್ದರಿಂದ, ಆರೋಪಿಯಾದ ನೀವು ಭಾ.ದಂ.ಸಂ.354 ರಡಿಯಲ್ಲಿ ಮತ್ತು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆಯ ಕಲಂ 3(1)(w)(i) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯಾದ ನೀವು ಚಾಸಾ.1 ರವರೊಂದಿಗೆ ಅಸಭ್ಯವಾಗಿ ನಡೆದುಕೊಳ್ಳಲು ಪ್ರಯತ್ನಿಸಿದಾಗ ಚಾಸಾ.1 ರವರು ನಿರಾಕರಿಸಿದಾಗ ಆರೋಪಿಯಾದ ನೀವು ನಿಮ್ಮ ರೂಮಿನಲ್ಲಿದ್ದ ಚಾಕುವನ್ನು ತೋರಿಸಿ ಬಲವಂತವಾಗಿ ಲೈಂಗಿಕ ಅತ್ಯಾಚಾರ ಮಾಡಿರುತ್ತೀರಿ. ಆದ್ದರಿಂದ, ಆರೋಪಿಯಾದ ನೀವು ಭಾ.ದಂ.ಸಂ.376 ರಡಿಯಲ್ಲಿ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆಯ ಕಲಂ 3(2)(va) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯಾದ ನೀವು ಚಾಸಾ.1 ರವರಿಗೆ ತನ್ನೊಂದಿಗೆ ಲೈಂಗಿಕವಾಗಿ ಸಹಕರಿಸದೇ ಇದ್ದಲ್ಲಿ ಕೊಲೆ ಮಾಡುವುದಾಗಿ ಹೆದರಿಸಿ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ, ಆರೋಪಿಯಾದ ನೀವು ಭಾ.ದಂ.ಸಂ.506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಆರೋಪಿತರಾದ ನಿಮಗೆ ಈ ಮೇಲಿನ ಆಪಾದನೆಯನ್ನು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**ದಿನಾಂಕ 18 ನೇ ಸೆಪ್ಟೆಂಬರ್ 2025.**

( **ಎ.ನಾಗಿರೆಡ್ಡಿ** )
3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.